(8)

ಕರ್ನಾಟಕ ಸರ್ಕಾರ

# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** **ಬೆಳಗಾವಿ ವಿಭಾಗದ** ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಪ.ಪೂ ಕಾಲೇಜು, ಮಾದರಿ ವಸತಿ ಶಾಲೆ(ನವೋದಯ) ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳ ನಿರ್ವಹಣೆಗೆ 2ನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 159 ಎಂಡಿಎಸ್ 2021 ದಿನಾಂಕ: 12.04.2021
2) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 159 ಎಂಡಿಎಸ್ 2021 ದಿನಾಂಕ: 01.07.2021
3) ಎಲ್ಲಾ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರ ಬೇಡಿಕೆಯ ಪಟ್ಟಿಗಳು.

>>>\$<<<

**ಪ್ರಸ್ತಾವನೆ:-**

ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ 2020-21 ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2021-22 ನೇ ಸಾಲಿನವರೆಗೆ ಮುಂದುವರೆಸಲು ಆದೇಶಿಸಿದೆ. ಉಲ್ಲೇಖ(2)ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆಗೆ 2ನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲಾಗಿದೆ.

**ಬೆಳಗಾವಿ ವಿಭಾಗದ** ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ) ಸರ್ಕಾರಿ ಮುಸ್ಲಿಂ ವಸತಿಶಾಲೆಗಳ ನಿರ್ವಹಣೆಗೆ (ಆಹಾರ ವೆಚ್ಚ, ವಸತಿ ಶಾಲೆಯ ಕಛೇರಿ ಲೇಖನ ಸಾಮಗ್ರಿಗಳ ವೆಚ್ಚ ಹಾಗೂ ಸ್ವಚ್ಛತೆ ಸಾಮಾಗ್ರಿಗಳು) 2ನೇ ತ್ರೈಮಾಸಿಕ(ಜುಲೈ-2021 ರಿಂದ ನವೆಂಬರ್-2021ವರೆಗೆ) ಅನುದಾನವನ್ನು ಬಿಡುಗಡೆಗೊಳಿಸುವಂತೆ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಕೋರಿರುತ್ತಾರೆ.

ಅದರಂತೆ **ಬೆಳಗಾವಿ ವಿಭಾಗದ** ಅಲ್ಪಸಂಖ್ಯಾತರ ವಸತಿಶಾಲೆ/ಕಾಲೇಜುಗಳ ನಿರ್ವಹಣೆಗೆ (ಆಹಾರ ವೆಚ್ಚ, ವಸತಿ ಶಾಲೆಯ ಕಛೇರಿ ಲೇಖನ ಸಾಮಗ್ರಿಗಳ ವೆಚ್ಚ ಹಾಗೂ ಸ್ವಚ್ಛತೆ ಸಾಮಾಗ್ರಿಗಳು) 2ನೇ ತ್ರೈಮಾಸಿಕ(ಜುಲೈ-2021 ರಿಂದ ನವೆಂಬರ್-2021ವರೆಗೆ) ಕಂತಾಗಿ **ಅನುಬಂಧ-04** ರಲ್ಲಿ ನಮೂದಿಸಿರುವ ಜಿಲ್ಲಾವಾರು ಶಾಲೆ/ಕಾಲೇಜುಗಳಿಗೆ ಒಟ್ಟು **ರೂ.3,61,06,000/-(ಮೂರು ಕೋಟಿ ಅರವತ್ತೊಂದು ಲಕ್ಷದ ಆರು ಸಾವಿರ ರೂ.ಗಳು ಮಾತ್ರ)**ಗಳ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಅನುದಾನ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

## ಆದೇಶ

**ಸಂಖ್ಯೆ: ಅಸಂನಿ/ಆ/ವಶಾ/ಅನು/ಬೆವಿ/ಸಿಆರ್-04(059)/2021-22** **ದಿನಾಂಕ: .10.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ, **ಅನುಬಂಧ-04** ರಲ್ಲಿ ನಮೂಧಿಸಿರುವ **ಬೆಳಗಾವಿ ವಿಭಾಗದ** ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ) ಮತ್ತು ಸರ್ಕಾರಿ ಮುಸ್ಲಿಂ ವಸತಿಶಾಲೆಗಳ ನಿರ್ವಹಣೆಗೆ (ಆಹಾರ ವೆಚ್ಚ, ವಸತಿ ಶಾಲೆಯ ಕಛೇರಿ ಲೇಖನ ಸಾಮಗ್ರಿಗಳ ವೆಚ್ಚ ಹಾಗೂ ಸ್ವಚ್ಛತೆ ಸಾಮಾಗ್ರಿಗಳು) 2ನೇ ತ್ರೈಮಾಸಿಕ(ಜುಲೈ-2021 ರಿಂದ ನವೆಂಬರ್-2021ವರೆಗೆ)

Contd....2

ಕಂತಾಗಿ **ರೂ.3,61,06,000/–(ಮೂರು ಕೋಟಿ ಅರವತ್ತೊಂದು ಲಕ್ಷದ ಆರು ಸಾವಿರ ರೂ.ಗಳು ಮಾತ್ರ)**ಗಳ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ** ರವರಿಗೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಿದೆ.

**ನಿಬಂಧನೆಗಳು:–**

1) ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು **ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು,** ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡುವಂತಿಲ್ಲ. ತಪ್ಪಿದ್ದಲ್ಲಿ ಮುಂದಿನ ಎಲ್ಲಾ ಆಗು ಹೋಗುಗಳಿಗೆ ತಮ್ಮನ್ನು ನೇರ ಹೊಣೆಗಾರನ್ನಾಗಿ ಮಾಡಲಾಗುವುದು.
2) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಇಲಾಖೆ, ರವರು ಕಡ್ಡಾಯವಾಗಿ ಸಂಬಂಧಪಟ್ಟ ಶಾಲೆ/ಕಾಲೇಜುಗಳ DDO ಕೋಡ್‌ಗೆ ಮರು ಬಿಡುಗಡೆಗೊಳಿಸಿ ಖರ್ಚು ವೆಚ್ಚಗಳನ್ನು ಭರಿಸುವುದು.
3) ಎಲ್ಲಾ ಖರೀದಿ ಹಾಗೂ ಸೇವೆಗಳನ್ನು ಕಡ್ಡಾಯವಾಗಿ ಕೆ.ಟಿ.ಪಿ.ಪಿ. ಕಾಯ್ದೆ ನಿಯಮಾನುಸಾರ ಖರ್ಚು ಭರಿಸತಕ್ಕದ್ದು.
4) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ವಸತಿಶಾಲೆಗಳ ಪ್ರಾಂಶುಪಾಲರಿಗೆ ನಿಯಮಾನುಸಾರ ಮರುಬಿಡುಗಡೆಗೊಳಿಸಿ ಖರ್ಚು ಭರಿಸತಕ್ಕದ್ದು.
5) ಸದರಿ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಮಾರ್ಚ್–2022ರ ಒಳಗಾಗಿ ವೆಚ್ಚ ಮಾಡತಕ್ಕದ್ದು.
6) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನ ಭರಿಸಿದ ವಿವರ ಪ್ರತಿ ತಿಂಗಳು 10ನೇ ತಾರೀಖಿನ ಒಳಗೆ (ಖಜಾನೆಯಿಂದ ಪಡೆದ 62ಬಿ ಪ್ರತಿಯೊಂದಿಗೆ) ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ಆಬ್ಜೆಕ್ಟ್ ಕೋಡ್ (059) ಲೆಕ್ಕಶೀರ್ಷಿಕೆ 2225–04–277–0–10 ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆ ರಾಜ್ಯವಲಯ ಯೋಜನೆ 2021–22ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸುವುದು.

**ನಿರ್ದೇಶಕರು,** 1/2/10/21
**ಅಲ್ಪಸಂಖ್ಯಾತರ ನಿರ್ದೇಶನಾಲಯ,**
**ಬೆಂಗಳೂರು.**

ಪ್ರತಿಯನ್ನು:–
1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ–3, ಬೆಂಗಳೂರು.
4. ಅನುಬಂಧ–04 ರಲ್ಲಿ ನಮೂದಿಸಿರುವ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
5. ಅನುಬಂಧ–04 ರಲ್ಲಿ ನಮೂದಿಸಿರುವ ಜಿಲ್ಲೆಗಳ ಉಪ ನಿರ್ದೇಶಕರು, ಜಿಲ್ಲಾ ಖಜಾನೆ
6. ಲೆಕ್ಕಪತ್ರ ಶಾಖೆ.
7. ಹೆಚ್ಚುವರಿ ಪ್ರತಿ/ಕಛೇರಿ ಪ್ರತಿ.